ದಿನಾಂಕಃ 23.07.2025 ರಂದು ಪಿ.ಡಬ್ಲ್ಯೂ-1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃಶ್ರೀ ಕೆ.ಎನ್. ವಕೀಲರಿಂದಃ

4. ದಾವಾ ಹೂಡಿದ ಸಂಧರ್ಭದಲ್ಲಿ 1ನೇ ಪ್ರತಿವಾದಿರವರಗೆ 80 ವರ್ಷ ಎಂದು ತಿಳಿಸಿರುತ್ತೇನೆ ಎಂದರೆ ಸರಿ. 2ನೇ ಪ್ರತಿವಾದಿಗೆ 52 ವರ್ಷ, 3ನೇ ಪ್ರತಿವಾದಿಗೆ 50 ವರ್ಷ, 4ನೇ ಪ್ರತಿವಾದಿಗೆ 48 ವರ್ಷ, ನನಗೆ 48 ವರ್ಷ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ನಾನು ಮತ್ತು 4ನೇ ಪ್ರತಿವಾದಿ ಅವಳಿ ಜವಳಿ ಮಕ್ಕಳು ಎಂದರೆ ಇಲ್ಲ. ದಿ.21.05.1971 ರಂದು ದಾವಾ ಸ್ವತ್ತು ಐಟಂ ನಂ.2 1ನೇ ಪ್ರತಿವಾದಿ ವೈ.ಎಸ್.ಶಿವಬಸಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದು ವಾದಪತ್ರದಲ್ಲಿ ತಿಳಿಸಿರುತ್ತೇನೆ ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ.2 ನ್ನು ಮಾರಾಟ ಮಾಡಿ ಸುಮಾರು 55 ವರ್ಷಗಳಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ತಿಳಿಸಿರುವ ವಯಸ್ಸುಗಳ ಆಧಾರದ ಮೇಲೆ ಕ್ರಯ ಪತ್ರವಾದಾಗ 1ನೇ ಪ್ರತಿವಾದಿಯ ವಯಸ್ಸು 25 ಎಂದರೆ ಗೊತ್ತಿಲ್ಲ. ವಾದ ಪತ್ರದಲ್ಲಿ ತಿಳಿಸಿರುವ ವಯಸ್ಸುಗಳ ಆಧಾರದ ಮೇಲೆ ಕ್ರಯ ಪತ್ರವಾದಾಗ ನಾನು ಮತ್ತು 2 ರಿಂದ 4 ನೇ ಪ್ರತಿವಾದಿಗಳು ಯಾರು ಜನಿಸಿರಲಿಲ್ಲ ಎಂದರೆ ಸರಿಯಲ್ಲ.

5. ದಾವಾ ಐಟಂ ನಂ.2 ನ್ನು ದಿ.21.05.1971 ರಲ್ಲಿ ರೂ.1000/- ಗೆ 9ನೇ ಪ್ರತಿವಾದಿಯ ತಂದೆಗೆ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನ ಸ್ವಾಧೀನವನ್ನೂ ಸಹ ನನ್ನ

ತಂದೆ 9ನೇ ಪ್ರತಿವಾದಿಯ ತಂದೆಗೆ ಬಿಟ್ಟಿರುತ್ತಾರೆ ಎಂದರೆ ಸರಿ. ಖಾತೆಯನ್ನೂ ಸಹ 9ನೇ ಪ್ರತಿವಾದಿಯ ತಂದೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. 9ನೇ ಪ್ರತಿವಾದಿಯ ತಂದೆಗೆ ಬಾಲಗಂಗಾಧರ, ಅರುಣ್ ಕುಮಾರ್, ಜ್ಯೋತಿ ಎಂಬ ಮಕ್ಕಳು ಎಂದರೆ ಸರಿ. ಶಿವಬಸಪ್ಪ ರವರ ಹೆಂಡತಿ ಹೆಸರು ಹೇಮಾಕ್ಷಿ ಎಂದರೆ ಸರಿ. ಶಿವಬಸಪ್ಪರವರ ಪಿತ್ರಾರ್ಜಿತ ಮತ್ತು ಸ್ವಯಾರ್ಜಿ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ದಿ.04.12.1995 ರಂದು ಪಂಚಾಯಿತಿ ಪಾಲುಪಾರಿಕತ್ತಿನ ಮೇಲೆ ಅವರ ಹೆಂಡತಿ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ದಾವಾ ಐಟಂ ನಂ.2, 9ನೇ ಪ್ರತಿವಾದಿ ಹಿಸ್ಸೆಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ 9ನೇ ಪ್ರತಿವಾದಿ ಅವರ ಹೆಂಡತಿ 10ನೇ ಪ್ರತಿವಾದಿಗೆ ಖಾತೆ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1998 ರಲ್ಲಿ 10ನೇ ಪ್ರತಿವಾದಿಗೆ ದಾವಾ ಐಟಂ ನಂ.2ಕ್ಕೆ ಖಾತೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 10 ನೇ ಪ್ರತಿವಾದಿ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ನಲ್ಲಿ ಸಾಲ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

6. ದಾವೆ ಹೂಡಲು ಮಾಹಿತಿ ನಾನೇ ನೀಡಿರುತ್ತೇನೆ. 9 ಮತ್ತು 10ನೇ ಪ್ರತಿವಾದಿಯರ ಹೆಸರಿನಲ್ಲಿರುವ ಖಾತೆಯನ್ನು ಪ್ರಶ್ನೆ ಮಾಡಿದ್ದೀರ ಎಂದರೆ ಇಲ್ಲ. ನನ್ನ ತಂದೆ 1ನೇ ಪ್ರತಿವಾದಿ ದಾವಾ ಐಟಂ ನಂ.2ಕ್ಕೆ ಕಂದಾಯ ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಬಗ್ಗೆ ಸರಿಯಾದ ಮಾಹಿತಿ ತಿಳಿದುಕೊಳ್ಳದೆ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ದಾವಾ ಐಟಂ ನಂ.2 ನ್ನು 9ನೇ ಪ್ರತಿವಾದಿಯ ತಂದೆ 1971 ರಲ್ಲಿ ಮಾರಾಟ ಮಾಡಿರುವ ಕಾರಣ ಅದರ ಮೇಲೆ ಹಕ್ಕನ್ನು ಕಳೆದುಕೊಂಡಿರುತ್ತಾರೆ

ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರವನ್ನು ನಮ್ಮ ಕುಟುಂಬದವರು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಕ್ರಯ ಪತ್ರ ಆದ ಸಮಯದಲ್ಲಿ ನಾನು ಜನಿಸಿಲ್ಲದ ಕಾರಣ ಸದರಿ ಕ್ರಯ ಪತ್ರಕ್ಕೆ ನಮ್ಮನ್ನು ಪಕ್ಷಗಾರರನ್ನಾಗಿ ಮಾಡಲು ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಚಿಕ್ಕ ವಯಸ್ಸಿನವರಾಗಿರುತ್ತೇವೆ ಎಂದು ನುಡಿಯುತ್ತಾರೆ. ಆದ ಕಾರಣ ಸದರಿ ದಾವೆ ಕಾಲ ಪರಿಮಿತಿ ಮೀರಿರುತ್ತದೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(5 ರಿಂದ 8 ಪ್ರತಿವಾದಿ ಪರ ವಕೀಲರು ಕಾಲಾವಾಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.)

(ಮರು ವಿಚಾರಣೆ ಇರುವುದಿಲ್ಲ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು
ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.